

ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ರಂಗಭೂಮಿ ಪೂರಕ






ಕುಡಿಯುವ ನೀರಿನ ತೊಂದರೆ, ಚಿಕ್ಕ ವಯಸ್ಸಿಗೆ ಹೆಣ್ಣುಮಕ್ಕಳ ಮದುವೆ, ಎಷ್ಟೊಂದು ಸಮಸ್ಯೆಗಳು. ನಂಜನಗೂಡು ತಾಲ್ಲೂಕಿನಲ್ಲಿಯೇ ಬರಪೀಡಿತವಾದ ದೊಡ್ಡಕವಲಂದೆ ಹೋಬಳಿಯ ವ್ಯಾಪ್ತಿಯಲ್ಲಿ ಬರುವ ಹೆಮ್ಮರಗಾಲ ಮತ್ತಿತರ ಊರುಗಳಲ್ಲಿ ನೀರಿನ ಸಮಸ್ಯೆ. ವಿಪರೀತ ಮಳೆ ಬೀಳುವ ಕರಾವಳಿಯಿಂದ ಬಂದ ನನಗೆ ನೀರಿನ ಸಮಸ್ಯೆ ಕಣ್ಣಾರೆ ಕಾಣುವಂತಾಯಿತು, ಅನುಭವಿಸುವಂತಾಯಿತು.

ತಮ್ಮೂರಿನ ವಲಸೆ, ಹಬ್ಬಗಳು, ಸಮಸ್ಯೆಗಳ ಕುರಿತು ಮಕ್ಕಳಿಗೆ ಬರೆಯಲು ಹೇಳಿದೆ. ಬರೆದರು. ಅದೂ ತಮ್ಮದೇ ಆದ ನಂಜನಗೂಡಿನ ಭಾಷೆಯಲ್ಲಿ ಬರೆದರು. ಅವರು ಬರೆದ ಬರಹಗಳನ್ನು ಸಂಗ್ರಹಿಸಿ 'ಗೋಡೆ ಪತ್ರಿಕೆ' ಮಾಡಿದೆ. ಮಕ್ಕಳ ಈ ಬರಹ ಶಾಲೆಯನ್ನು ದಾಟಬೇಕು ಎಂದು ಕೈಬರಹದ ಪತ್ರಿಕೆ ಮಾಡುವ ಆಲೋಚನೆಯಲ್ಲಿ ಪತ್ರಿಕೆಗೊಂದು ಹೆಸರು ಬೇಕಲ್ಲ ಅಂತ ಹುಡುಕಾಡುತ್ತಿದ್ದಾಗ ಚಾಮರಾಜನಗರದ ಕೆ. ವೆಂಕಟರಾಜು ಅವರು, 'ನಿಮ್ಮೂರಿನ ಹೆಸರಲ್ಲೇ ಇದೆಯಲ್ಲ ಹೆಮ್ಮರ' ಅಂದರು. ಅದೇ ಪತ್ರಿಕೆಯ ಹೆಸರಾಯಿತು.

ಸುಮಾರು ಮೂರು ವರ್ಷ 'ಹೆಮ್ಮರ' ಪ್ರಕಟವಾಯಿತು. 'ಹೆಮ್ಮರ'ವ ಕಂಡು ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ಹಲವಾರು ಶಾಲಾ ಪತ್ರಿಕೆಗಳು ಹುಟ್ಟಿಕೊಂಡವು. ಕನ್ನಡ ನಾಡಿನ ಹಿರಿಯ ಸಾಹಿತಿಗಳು ನಮ್ಮ ಮಕ್ಕಳೊಂದಿಗೆ 'ಹೆಮ್ಮರ' ಪತ್ರಿಕೆಗೆ ಬರೆದರು. 'ಹೆಮ್ಮರದಲ್ಲಿ ಹಕ್ಕಿಗೂಡು' ಎಂಬ ವಿಶೇಷಾಂಕದೊಂದಿಗೆ 'ಹೆಮ್ಮರ' ಪತ್ರಿಕೆಯ ಪ್ರಕಟಣೆ ನಿಂತಿತು. ಆದರೆ ಹಲವಾರು ಮಕ್ಕಳು ಇಂದಿಗೂ ಪತ್ರಿಕೆಯ ಸಂಚಿಕೆಗಳನ್ನು ತಮ್ಮ ಬಳಿ ಇಟ್ಟುಕೊಂಡಿದ್ದಾರೆ.

ಮಕ್ಕಳೇ ಬರೆದ ಆಶು ಕತೆಗಳ ಸಂಕಲನ 'ಕುಣಿದಾಡುವ ಕತೆಗಳು' ಪ್ರಕಟವಾಯಿತು. ಆದರೆ ಇಡೀ ಪುಸ್ತಕ ಕೈಬರಹದಲ್ಲಿ ಇರುವುದರಿಂದ ತುಂಬಾ ಪ್ರತಿಗಳನ್ನು ಮಾಡುವುದು ಸಾಧ್ಯವಾಗಲಿಲ್ಲ. ನನ್ನ ನಾಟಕದ ಮೇಷ್ಟ್ರಗಿರಿ ಹೀಗೆ ಮಕ್ಕಳ ಭಾವಪ್ರಪಂಚದಿಂದ ಹೊಮ್ಮಲಾರಂಭಿಸಿತು. ತರಗತಿಯ ಪಠ್ಯಗಳ ಓದು, ಪ್ರಸ್ತುತಿ, ಪರಿಸರದ ಕುರಿತ ನಾಟಕಗಳು ರೂಪುಗೊಳ್ಳಲಾರಂಭಿಸಿದ್ದು ಹೆಮ್ಮರಗಾಲದಲ್ಲಿಯೇ. ಆಗಿನ ಸಹೋದ್ಯೋಗಿ